| [illegible] | [illegible] | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ | [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>KAN-1 | 10 ನಿ | ಕನ್ನಡ<br>ಆನೆ ಹಿಂದೆ | * ಸರಳ ಪದಗಳನ್ನು ವಾಕ್ಯಗಳನ್ನು ಉಚ್ಚರಿಸುವರು. | ಪಠ್ಯ ಪುಸ್ತಕ | ಶಿಕ್ಷಕ | ಮುಂದಿನ ಕಲಿಕೆಗೆ ಮಾರ್ಗದರ್ಶನ ನೀಡುವರು.<br>ಪಠ್ಯಪುಸ್ತಕ ಪುಟ 4ನ್ನು ತೆರೆಯಲು ಸೂಚಿಸುವರು. | ಕನ್ನಡ<br>ಮೂರು ಕೊಡಲಿಗಳು | * ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯವನ್ನು ಬೆಳೆಸುವರು. | ಪಠ್ಯ ಪುಸ್ತಕ | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ವೃತ್ತಾಕಾರವಾಗಿ ಕುಳಿತು, ಪುಟ ಸಂಖ್ಯೆ –10ರ ""ಆಗ ದೇವತೆ........ಎಂದ". ವರೆಗೆ ಪ್ರತಿ ವಿದ್ಯಾರ್ಥಿಯನ್ನು ಓದಿಸಲು ತಿಳಿಸುವರು. |
| | 30 ನಿ | | | | ಶಿಕ್ಷಕ | ಪುಟಸಂಖ್ಯೆ 4ರ ""ಆನೆ ಹಿಂದೆ…….. ..............ಸೊಂಡಿಲು ಆಡಿಸಿತು" ವರೆಗೆ ಸ್ವರಭಾರದೊಂದಿಗೆ ಓದುವರು. ಮಕ್ಕಳು ಶಿಕ್ಷಕರ ಓದನ್ನು ಆಲಿಸುವರು. ಪಾಠಭಾಗಕ್ಕೆ ಸಂಬಂಧಿಸಿದಂತೆ ಪ್ರಶ್ನಿಸಿ ಮಕ್ಕಳಿಂದ ಉತ್ತರ ಪಡೆಯುವರು.<br>ಉದಾ : ಮಕ್ಕಳು ಹೇಗೆ ಕುಣಿದರು ?<br>ಆನೆಯ ಹಿಂದೆ ಯಾರ ಗುಂಪು ಇತ್ತು ?<br>ಇತ್ಯಾದಿ. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | ವಾಲ್<br>ಸ್ಲೇಟ್<br>ಪಠ್ಯಪುಸ್ತಕ<br>ಪೆನ್ಸಿಲ್ | ಶಿಕ್ಷಕ | ಕಪ್ಪು ಹಲಗೆಯ ಮೇಲೆ ಮತ್ತೆ ಬರೆಯುವ ಕ್ರಮವನ್ನು ತೋರಿಸಿ ಓರ್ವ ವಿದ್ಯಾರ್ಥಿಯಿಂದ ಬರೆಸುವರು ಎಲ್ಲರೂ ಅದೇ ಕ್ರಮದಲ್ಲಿ ವಾಲ್ ಸ್ಲೇಟ್ ಮೇಲೆ ಅಭ್ಯಾಸ ಮಾಡಲು ಸೂಚಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 30 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯಲ್ಲಿ ಸರಿಯಾಗಿ ಓದದ ಮಕ್ಕಳಿಂದ ಓದಿಸುವರು ಹಾಗೂ ತಪ್ಪುಗಳನ್ನು ತಿದ್ದಿ ಸೂಕ್ತ ಓದನ್ನು ಅನುಕರಿಸುವಂತೆ ಮಾಡುವರು.<br>* ""ದೇವತೆ ಮತ್ತೆ............................... ಕೊಡಲಿಗಳನ್ನು ಕೊಟ್ಟಳು" ವರೆಗೆ ಸೂಕ್ತ ಸ್ವರಭಾರದೊಂದಿಗೆ ಓದುವರು. ಮಕ್ಕಳು ಗಮನಿಸುವರು ಹಾಗೂ ಚೆನ್ನಾಗಿ ಓದುವ ವಿದ್ಯಾರ್ಥಿಗಳಿಂದ ಓದಿಸಿ ತಪ್ಪುಗಳನ್ನು ತಿದ್ದುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು | | | | ಶಿಕ್ಷಕ | ಮೇಲಿನ ಪಾಠ ಭಾಗವನ್ನು ಓದಿಕೊಂಡು ಬರುವಂತೆ ತಿಳಿಸುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | | ಜೀವನ ವಿಜ್ಞಾನ<br>ಆಹಾರ ಏನು? ಏಕೆ ? | * ಆಹಾರದ ಪ್ರಾಮುಖ್ಯತೆಯನ್ನು ಗುರುತಿಸುವರು.<br>* ಎಂತಹ ಆಹಾರ ಸೇವಿಸಬೇಕು ಎಂದು ಅರಿಯುವರು.<br>* ಆಹಾರದಲ್ಲಿ ಇರುವ ಪೋಷಕಾಂಶಗಳ ಸ್ಥೂಲ ಪರಿಚಯ | ಆಹಾರ ಪದಾರ್ಥಗಳ ಚಾರ್ಟ್ | | 1 ಹಾಗೂ 2ನೇ ತರಗತಿಯ ಜೀವನ ವಿಜ್ಞಾನದ ಸಾಮರ್ಥ್ಯ ಗಳು ಸಂಪೂರ್ಣ ಹೊಂದಾಣಿಕೆಯಾಗುವುದರಿಂದ ಎರಡೂ ತರಗತಿಗಳೂ ಒಟ್ಟುಗೂಡಿ ಚಟುವಟಿಕೆಯಲ್ಲಿ ತೊಡಗುವರು | | | | | |
| | 20 ನಿ | | | | ಶಿಕ್ಷಕ | ಮೊದಲಿಗೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಹಣ್ಣು–ಹೂವು–ತರಕಾರಿ ಆಟ ಆಡಿಸುವರು ವಿದ್ಯಾರ್ಥಿಗಳು ಸಕ್ರಿಯವಾಗಿ ಆಟದಲ್ಲಿ ಭಾಗವಹಿಸುವರು. | | | | | (ಆಟ :– ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಒಬ್ಬ ವಿದ್ಯಾರ್ಥಿಯನ್ನು ಅವರೆದುರಿಗೆ ನಿಧಾನವಾಗಿ ಚಲಿಸುವಂತೆ ಹೇಳುವುದು. ಈಗ ನಡೆಯುತ್ತಿರುವ ವಿದ್ಯಾರ್ಥಿ ಒಬ್ಬ ವಿದ್ಯಾರ್ಥಿಯ ಮುಂದೆ ನಿಂತು ಹಣ್ಣು ಎಂದರೆ ಆ ವಿದ್ಯಾರ್ಥಿ ಒಂದು ಹಣ್ಣಿನ ಹೆಸರನ್ನು ಹೇಳಬೇಕು. ಹೇಗೆ ಆಟ ಮುಂದುವರಿಸುವುದು. ಹಣ್ಣು / ಹೂವು / ತರಕಾರಿಯ ಹೆಸರು ಹೇಳದಿದ್ದರೆ ಆ ಮಗು ಆಟದಿಂದ ಹೊರಹೋಗಬೇಕು) |
| | 30 ನಿ | | | | ಶಿಕ್ಷಕ | ಮಕ್ಕಳು ಈ ದಿನ ಸೇವಿಸಿದ ಆಹಾರದ ಬಗ್ಗೆ ಚರ್ಚಿಸುತ್ತಾ ಶಿಕ್ಷಕರು, ಆಹಾರವನ್ನು ಏಕೆ ಸೇವಿಸಬೇಕು. ಅದರ ಪ್ರಯೋಜನಗಳ ಬಗ್ಗೆ ವಿವರಿಸುವರು.<br>"ನಂತರ ರೋಗಗಳು ಹೇಗೆ ಬರುತ್ತವೆ" ಎಂಬಂತಹ ಪ್ರಶ್ನೆ ಕೇಳುತ್ತಾ ಎಂತಹ ಆಹಾರವನ್ನು ಸೇವಿಸಬೇಕು, ಯಾವಾಗ ಸೇವಿಸಬೇಕು ಮತ್ತು ಎಂತಹ ಆಹಾರವನ್ನು ಸೇವಿಸಬಾರದು ಎಂಬುದನ್ನು ಪ್ರಶ್ನೆಗಳ ಕೇಳುತ್ತಾ ಮಕ್ಕಳೊಂದಿಗೆ ಸರಳ ಚರ್ಚೆ ನಡೆಸುವರು. | | | | | |
| | 20 ನಿ | | | | ಶಿಕ್ಷಕ | ಈಗ ಶಿಕ್ಷಕರು ಮಕ್ಕಳು ಈವರೆಗೆ ತಿಳಿದುಕೊಂಡ ವಿಷಯಗಳ ಬಗ್ಗೆ ಪ್ರತಿ ಮಗುವಿಗೆ ಒಂದು ವಾಕ್ಯ ಹೇಳುವಂತೆ ಸೂಚಿಸುವರು. ಎಂತಹ ಆಹಾರವನ್ನು ಸೇವಿಸಬಾರದು ಎಂಬ ವಿಷಯದ ಬಗ್ಗೆ ಕಾರಣ ಸಹಿತ ಸರಳ ಚರ್ಚೆಗೆ ಅವಕಾಶ ಮಾಡಿಕೊಡುವರು. | | | | | ಒಂದನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಚಟುವಟಿಕೆಯಲ್ಲ ಪಾಲ್ಗೊಳ್ಳುವರು. |
| | 10 ನಿ | | | | ಶಿಕ್ಷಕ | ಈ ದಿನ ತಿಳಿದುಕೊಂಡ ಆಹಾರದ ಪ್ರಾಮುಖ್ಯತೆಯನ್ನು ಕುರಿತು ಶಿಕ್ಷಕರು ಪ್ರಶ್ನಿಸಿ ಉತ್ತರ ಪಡೆಯುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ನಿಮಿಷ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಕಲಿಕಾ ಅಂಶ | ಸಾಮರ್ಥ್ಯ | ಬಳಸಬೇಕಾದ ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಕಲಿಕಾ ಅಂಶ | ಸಾಮರ್ಥ್ಯ | ಬಳಸಬೇಕಾದ ಕಲಿಕೋಪಕರಣ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>EVS-4 | 10 ನಿ | ಪರಿಸರ ಅಧ್ಯಯನ<br>ನಮ್ಮ ಸುತ್ತಲಿನ ಪ್ರಾಣಿ ಮತ್ತು ಸಸ್ಯಗಳ ಲೋಕ | ಸಸ್ಯಗಳು ಮತ್ತು ಪ್ರಾಣಿಗಳು ಪಾಲನೆ ಮತ್ತು ರಕ್ಷಣೆ ಕುರಿತು ತಿಳಿಯುವರು. | ಪೂರಕ ಕಥೆ | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :**<br>ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು ಒಂದು ಮಗು ವೃತ್ತದೊಳಗೆ ಓಡುತ್ತಾ "'ಬಂತು ನೋಡಿ ಬಂತು" ಎಂದು ಕೂಗುವುದು ಉಳಿದ ಮಕ್ಕಳು ಯಾವ ಪ್ರಾಣಿ ಬಂತು ? ಎಂದು ಕೇಳುವರು ವೃತ್ತದೊಳಗಿನ ಮಗು ಒಂದು ಮಗುವಿನ ಹತ್ತಿರ ನಿಂತು ಒಂದು ಪ್ರಾಣಿಯ ಹೆಸರು ಹೇಳಬೇಕು ಎದುರುಗಿರುವ ಮಗು ಆ ಪ್ರಾಣಿ ಸಾಕು ಪ್ರಾಣಿಯೋ, ಕಾಡು ಪ್ರಾಣಿಯೋ ಎಂಬುದನ್ನು ಹೇಳಬೇಕು – ಹೀಗೆ ಚಟುವಟಿಕೆ ಮುಂದುವರಿಯುವುದು. ಮಗು ಹೇಳದಿದ್ದರೆ ಮಗು ಹೊರಗೆ ಉಳಿಯುವುದು. | ಪರಿಸರ ಅಧ್ಯಯನ<br>ನಮ್ಮ ಸುತ್ತಲಿನ ಸಸ್ಯಗಳು | ತಮ್ಮ ಸುತ್ತಲಿನ (ಸ್ಥಳೀಯ) ಪರಿಸರದಲ್ಲಿನ ಮರಗಿಡಗಳು ಹಾಗೂ ಬೆಳೆಗಳನ್ನು ಗುರುತಿಸುವರು. ಸಸ್ಯಗಳ ಎತ್ತರ, ಎಲೆಗಳ ಆಕಾರ ಹಾಗೂ ಬಣ್ಣ ಮುಂತಾದವುಗಳನ್ನು ಹೋಲಿಸುವರು. | | ಶಿಕ್ಷಕ | 1ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು |
| | 20 ನಿ | | | | ಶಿಕ್ಷಕ | ಮೇಲ್ಕಂಡ ಚಟುವಟಿಕೆಯಲ್ಲಿ ಭಾಗವಹಿಸುವರು. | | | | ಶಿಕ್ಷಕರು | ಮೇಲಿನಂತೆ 1ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | 1 ಮತ್ತು 2ನೇ ತರಗತಿಯ ಮಕ್ಕಳನ್ನು ಒಟ್ಟಾಗಿ ಕೂರಿಸಿಕೊಂಡು 2ನೇ ತರಗತಿಯಲ್ಲಿ ಸೂಚಿಸಿರುವಂತೆ ಕಲಿಕಾಂಶ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | 1ನೇ ತರಗತಿಯ ಮಕ್ಕಳೊಂದಿಗೆ ಸೂಚನೆಯಲ್ಲಿರುವಂತೆ ಅನುಸರಿಸುವರು. |
| | 40 ನಿ | | | | ಶಿಕ್ಷಕ | 2ನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | ಸಸ್ಯಗಳ ಚಿತ್ರಗಳು | ಶಿಕ್ಷಕ | ವಿವಿಧ ರೀತಿಯ ಸಸ್ಯಗಳ ಚಿತ್ರಗಳನ್ನು ತೋರಿಸಿ ಅವುಗಳನ್ನು ಹೆಸರಿಸಲು ತಿಳಿಸುವರು. ನಂತರ ಚಿಕ್ಕ ಗಾತ್ರದ ಸಸ್ಯಗಳು ಹಾಗೂ ದೊಡ್ಡ ಗಾತ್ರದ ಸಸ್ಯಗಳಾಗಿ ವಿಂಗಡಿಸುವಂತೆ ತಿಳಿಸಿ ಅವುಗಳನ್ನು ಗಿಡಗಳು ಮತ್ತು ಮರಗಳಾಗಿ ಹೆಸರಿಸುವರು. |
| | 05 ನಿ | | | | | ಮುಂದಿನ ಅವಧಿಯ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. | | | | | 1ನೇ ತರಗತಿಯಲ್ಲಿ ತಿಳಿಸಿರುವಂತೆ ಮುಂದಿನ ಅವಧಿಗೆ ಸಿದ್ಧತೆ ಮಾಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ಕಲಿಕಾ ಅಂಶ / ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣ / ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಕಲಿಕಾ ಅಂಶ / ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣ / ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | | ಸಾ.ಉ.ಉ.ಕಾ. "ಶುಭಾಶಯ ಪತ್ರ ತಯಾರಿ" | * ನೀಡಿದ ಮಡಿಸಿದ ಸ್ವರೂಪಗಳನ್ನು ತಮ್ಮ ಕಲ್ಪನಾ ಸಾಮರ್ಥ್ಯದಿಂದ ವಿವಿಧ ವಸ್ತುಗಳನ್ನು ಎಳೆ ಶುಭಾಶಯ ಪತ್ರಗಳನ್ನು ತಯಾರಿಸುವರು. | ಬಣ್ಣದ ಹಾಳೆಗಳು ಬಿಳಿ ಕಾರ್ಡ್ ಕತ್ತರಿ | | **ಸೂಚನೆ :** ಸಾ.ಉ.ಉ.ಕಾದ ಎಲ್ಲಾ ವಿಷಯಾಂಶಗಳು ಹಾಗೂ ಸಾಮರ್ಥ್ಯಗಳು ಸಂಪೂರ್ಣ ಸಹಸಂಬಂಧ ಹೊಂದಿರುವುದರಿಂದ, ಎರಡೂ ತರಗತಿಗಳೂ ಒಟ್ಟುಗೂಡಿ, ಚಟುವಟಿಕೆಯಲ್ಲಿ ತೊಡಗುವರು | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ತೊಡಗುವರು. |
| | 10 ನಿ | | | | ಶಿಕ್ಷಕ | ಮೊದಲಿಗೆ ಎಲ್ಲಾ ವಿದ್ಯಾರ್ಥಿಗಳನ್ನು ಅವರ ಸಂಖ್ಯೆಗಳಿಗೆ ಅನುಗುಣವಾಗಿ 10–12 ಗುಂಪುಗಳನ್ನಾಗಿ ಮಾಡಿ ತರಗತಿಯಲ್ಲಿ ಕೂರಿಸುವರು ಮತ್ತು ವಸ್ತುಗಳನ್ನು ವಿತರಿಸುವರು. | | | | | |
| | 35 ನಿ | | | | ಶಿಕ್ಷಕ | ನಂತರ ಮಕ್ಕಳಿಗೆ ಬಣ್ಣದ ಕಾಗದಗಳ ಉದ್ದ ಪಟ್ಟಿಗಳನ್ನು ನೀಡಿ ಅವುಗಳನ್ನು ಒಂದಕ್ಕೊಂದು ಸೇರಿಸಿ ಮಡಿಸಲು ಹೇಳುವರು.<br>ನಂತರ ಶಿಕ್ಷಕರು ಕ್ರಮವಾಗಿ ಎಲ್ಲಾ ಗುಂಪುಗಳಿಗೆ ಹೋಗಿ, ಬಣ್ಣದ ಕಾಗದವನ್ನು ಎಲೆ ಹಾಗೂ ಹೂವಿನ ದಳಗಳ ಆಕಾರದಲ್ಲಿ ಕತ್ತರಿಸುವರು. <br>ಮಕ್ಕಳು, ನಂತರ ಕತ್ತರಿಸಿದ ಬಣ್ಣದ ಕಾಗದಗಳನ್ನು ತಮ್ಮ ತಮ್ಮ ಕಲ್ಪನೆಗೆ ತಕ್ಕಂತೆ ಚೌಕಾಕಾರದ ಬಿಳಿ ಹಾಳೆಯ ಮೇಲೆ ಜೋಡಿಸುವರು. | | | | | |
| | 10 ನಿ | | | | ಶಿಕ್ಷಕ | ಶಿಕ್ಷಕರು ಮಕ್ಕಳ ಚಟುವಟಿಕೆ, (ಕಾರ್ಡ್) ಗಮನಿಸಿ, ಅವಶ್ಯಕವಿದ್ದಲ್ಲಿ ಜೋಡಣೆ ಬದಲಿಸಿ, ಈಗ ಅವುಗಳನ್ನು ಜೋಡಣೆಗೆ ತಕ್ಕಂತೆಯೇ ಅಂಟಿಸಲು ಹೇಳುವರು. | | | | | |
| | 20 ನಿ | | | | ಶಿಕ್ಷಕ | ಮಕ್ಕಳು ಬಣ್ಣದ ಹಾಳೆಗಳನ್ನು ಬಿಳಿ ಕಾರ್ಡ್‌ಗೆ ಅಂಟಿಸುವರು.<br>ಶಿಕ್ಷಕರು ಅವರ ಚಟುವಟಿಕೆಯನ್ನು ನಿರಂತರವಾಗಿ ಗಮನಿಸುವರು. | | | | | |
| | 05 ನಿ | | | | ಶಿಕ್ಷಕ | ಎಲ್ಲಾ ಮಕ್ಕಳ ಕಾರ್ಡ್‌ಗಳನ್ನು ಶಿಕ್ಷಕರು ಸಂಗ್ರಹಿಸಿಟ್ಟುಕೊಳ್ಳುವರು. (ಮುಂದಿನ ತರಗತಿಗೆ ಮುಂದುವರಿಯುತ್ತದೆ................) | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 01 (KAN-11) | 10 ನಿ | ಕನ್ನಡ<br>ಆನೆ ಬಂತೊಂದಾನೆ | ಸರಳ ಪದಗಳನ್ನು – ವಾಕ್ಯಗಳನ್ನು ಉಚ್ಛರಿಸುವುದು, | | ಶಿಕ್ಷಕ | ಪಾಠಕ್ಕೆ ಸಂಬಂಧಿಸಿದಂತೆ ಅಗತ್ಯ ಪೂರ್ವಸಿದ್ಧತೆ ಮಾಡಿಸುವರು.<br>ಪಠ್ಯಪುಸ್ತಕ ಪುಟ–5ನ್ನು ತೆರೆಯಲು ಸೂಚಿಸುವರು. | ಕನ್ನಡ<br>ಮೂರು ಕೊಡಲಿಗಳು | ಸುಮಾರು ಪದ್ಯಗಳನ್ನು ಓದಿ ಗ್ರಹಿಸುವ ಸಾಮರ್ಥ್ಯವನ್ನು ಬೆಳೆಸುವುದು | ಪಠ್ಯ ಪುಸ್ತಕ | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಪಠ್ಯಪುಸ್ತಕದ ಪುಟ 10ನ್ನು ತೆರೆದು "ದೇವತೆ ಮತ್ತೆ.....................ಕೊಟ್ಟಳು" ವರೆಗೆ ವಿದ್ಯಾರ್ಥಿಗಳಿಂದ ವೈಯಕ್ತಿಕವಾಗಿ ಓದಿಸಲು ತಿಳಿಸುವರು. |
| | 30 ನಿ | | | ಪಠ್ಯ ಪುಸ್ತಕ | ಶಿಕ್ಷಕ | ಪುಟಸಂಖ್ಯೆ–5ರ ""ಹೆಜ್ಜೆ ಮುಂದೆ................................ ಜೈ! ಜೈ! ಜೈ! ಪ್ರಾಣಿದಯೆ"ವರೆಗೆ ಸೂಕ್ತ ಸ್ವರಭಾರದೊಂದಿಗೆ ಓದುವರು. ನಂತರ ಮಕ್ಕಳಿಗೆ ಹೇಳಿಕೊಟ್ಟು ಹೇಳಿಸುವರು. ಕೆಲವು ವಿಶೇಷ (ಚೀಂವ್, ಚೀಂವ್ ಢಪಾ! ಢಪಾ! ಹೊಯ್! ಹೊಯ್!) ಪದಗಳನ್ನು ಪುನರಾವರ್ತಿಸಿ ಮಕ್ಕಳಿಂದಲೂ ಹೇಳಿಸುವರು. | | | ಪಠ್ಯ ಪುಸ್ತಕ | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು |
| | 05 ನಿ | | | ವಾಲ್ ಸ್ಲೇಟ್ | ಶಿಕ್ಷಕ | ಮಕ್ಕಳು ವಾಲ್ ಸ್ಲೇಟ್ ಮೇಲೆ ವೃತ್ತಗಳನ್ನು ಬರೆದು ಅಭ್ಯಾಸ ಮಾಡಿಸಲು ಸೂಚಿಸುವರು. | | | ಪಠ್ಯ ಪುಸ್ತಕ | ಶಿಕ್ಷಕರು | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಸರಿಯಾಗಿ ಓದದ ಮಕ್ಕಳನ್ನು ಗುರುತಿಸಿಕೊಳ್ಳುವರು. |
| | 30 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | ಪ್ರಶ್ನೋತ್ತರ ಕಾರ್ಡುಗಳು | ಶಿಕ್ಷಕ | ಸರಿಯಾಗಿ ಓದದ ಮಕ್ಕಳಿಂದ ತಿದ್ದಿ ಸೂಕ್ತಮಾರ್ಗ ದರ್ಶನ ನೀಡಿ ಓದಿಸುವರು.<br>ಪದಗಳ ಮಿಂಚುಪಟ್ಟಿಗಳನ್ನು ಬಳಸಿ ಅವುಗಳನ್ನು ವೈಯಕ್ತಿಕವಾಗಿ ಓದಿಸುವರು. ಹಾಗೂ ಪಾಠದ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳುವರು. ಮಕ್ಕಳು ಉತ್ತರಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | ಮಿಂಚು ಪಟ್ಟಿಗಳು | ಶಿಕ್ಷಕ | ಮಿಂಚು ಪಟ್ಟಿಯಲ್ಲಿ ಪ್ರದರ್ಶಿಸಿದ ಪದಗಳನ್ನು ನೋಟ್ ಪುಸ್ತಕದಲ್ಲಿ ಬರೆದುಕೊಳ್ಳಲು ತಿಳಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕ | ಸಾಮರ್ಥ್ಯಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕ | ಸಾಮರ್ಥ್ಯಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2**<br>**M-7** | 10 ನಿ | ಗಣಿತ<br>ಸಂಖ್ಯೆಗಳು | * 6 ರಿಂದ 10ರ ವರೆಗಿನ ಸಂಖ್ಯೆಗಳನ್ನು ಓದುವುದು, ಗುರುತಿಸುವುದು ಮತ್ತು ಬರೆಯುವುದು. | ಸ್ಲೇಟ್, ಬಳಪ, ರಬ್ಬರ್ ಅಕ್ಷರ ಇತ್ಯಾದಿ.. | ಶಿಕ್ಷಕ | **ಕಲಿಕೆಯ ಚಟುವಟಿಕೆ :–**<br>ಶಿಕ್ಷಕರು ಹಿರೇಮಣಿಯ ನೇತೃತ್ವದಲ್ಲಿ, ತಮ್ಮ ಸ್ಲೇಟಿನಲ್ಲಿ 6 ಮತ್ತು 7 ಬರೆದು ಅದನ್ನು ತಿದ್ದುವುದಕ್ಕೆ ಮಾರ್ಗದರ್ಶನ ನೀಡುವರು. ನಂತರ ಪಠ್ಯಪುಸ್ತಕದ ಪುಟ – 30, 31ರ ತಿದ್ದಿ ಬರೆ ಚಟುವಟಿಕೆ ಮಾಡಿಸುವರು. | ಗಣಿತ<br>ಸಂಖ್ಯೆಗಳು | * ಎರಡು ಅಂಕಿಗಳುಳ್ಳ ಸಂಖ್ಯೆಗಳಲ್ಲಿ ಬಿಡಿ ಮತ್ತು ಹತ್ತು ಸ್ಥಾನಗಳನ್ನು ಗುರುತಿಸುವುದು ಹಾಗೂ ಹತ್ತು ಗುಂಪು, ಬಿಡಿಗಳಾಗಿ ಬಳಸುವುದು. | ಸಂಖ್ಯಾ ಕಾರ್ಡ್‌ಗಳು | ಹಿರೇಮಣಿ | 99ಕ್ಕೆ ಮೀರದಂತೆ ಸಂಖ್ಯೆಗಳ ಕಾರ್ಡ್‌ನ್ನು ಹಿರೇಮಣಿ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಹಂಚುವರು. (ಶಿಕ್ಷಕರ ಸೂಚನೆಯಂತೆ....) |
| | 25 ನಿ | | | | ಹಿರೇಮಣಿ | ಮೇಲಿನಂತೆ ಮಕ್ಕಳು 6–7 ಸಂಖ್ಯೆಗಳನ್ನು ಹೇಳುತ್ತಾ ತಿದ್ದಿ – ಬರೆಯುವರು. | | | ಸ್ಥಾನ ಬೆಲೆ ಪಟ್ಟಿ | ಶಿಕ್ಷಕ | ಶಿಕ್ಷಕರು ಮಾದರಿಯಾಗಿ ಒಬ್ಬ ವಿದ್ಯಾರ್ಥಿಯನ್ನು ಕರೆದು, ಅವನ ಕಾರ್ಡ್‌ನಲ್ಲಿರುವ ಸಂಖ್ಯೆಗಳಲ್ಲಿ ಹತ್ತು ಮತ್ತು ಬಿಡಿಗಳನ್ನು ಎಣಿಸಿ ಅದನ್ನು ಬರೆಯುವ ವಿಧಾನವನ್ನು ಪರಿಚಯಿಸುವರು.<br>ಉದಾ : 36 = [ಹತ್ತು \| ಬಿಡಿ ; 3 \| 6] = 3 ಹತ್ತುಗಳು + 6 ಬಿಡಿ<br>ನಂತರ 3 ಹತ್ತುಗಳು ಎಂದರೆ, 30<br>6 ಬಿಡಿಗಳು ಎಂದರೆ 6 ಎಂದು ಓದುವ ವಿಧಾನವನ್ನು ಮಕ್ಕಳಿಗೆ ಪರಿಚಯ ಮಾಡಿಸುವರು. |
| | 05 ನಿ | | | | ಶಿಕ್ಷಕ | ವಿದ್ಯಾರ್ಥಿಗಳ ಬರವಣಿಗೆ ಗಮನಿಸಿ, ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಇದೇ ರೀತಿ ಮಕ್ಕಳ ಗುಂಪು ಮಾಡಿ, ಅವರ ಕಾರ್ಡ್ ಬದಲಿಸುತ್ತಾ, ಹತ್ತು ಮತ್ತು ಬಿಡಿಗಳನ್ನು ಮೇಲಿನ ಮಾದರಿಯಂತೆ ಬರೆಯಲು ವಿದ್ಯಾರ್ಥಿಗಳಿಗೆ ಸೂಚನೆ ನೀಡುವರು. |
| | 30 ನಿ | | | | ಶಿಕ್ಷಕ | ಮಕ್ಕಳಿಗೆ ಬೀಜಗಳು, ಕಾಳುಗಳು, ಗುಂಡಿಗಳು ಮತ್ತು ಮಣಿಗಳನ್ನು ನೀಡಿ ಅವುಗಳಲ್ಲಿ 6 ಮತ್ತು 7 ವಸ್ತುಗಳನ್ನು ಎಣಿಸಿ, ಇಡುವುದನ್ನು ಪರಿಚಯಿಸುವರು ಮತ್ತು ಕೈ–ಬೆರಳುಗಳಲ್ಲಿ 6–7ನ್ನು ಎಣಿಸಲು ಅಭ್ಯಾಸ ಮಾಡಿಸುವರು. ನಂತರ 6ರ ಮತ್ತು 7ರ ಸಂಖ್ಯಾ ಕಾರ್ಡ್‌ಗಳನ್ನು ಎಣಿಸಿದ ವಸ್ತುಗಳೊಂದಿಗೆ ಹೊಂದಿಸಲು ಸೂಚಿಸುವರು. | | | | ಹಿರೇಮಣಿ | ಮಕ್ಕಳು ತಮ್ಮ ಗುಂಪುಗಳ ಹಿರೇಮಣಿಯ ನೇತೃತ್ವದಲ್ಲಿ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಮಕ್ಕಳ ಎಣಿಕೆ ಬರವಣಿಗೆಯ ಚಟುವಟಿಕೆಯನ್ನು ವೀಕ್ಷಿಸಿ ಅಗತ್ಯ ಸಲಹೆ–ಸೂಚನೆಗಳನ್ನು ನೀಡುವರು. | | | | | ಮಕ್ಕಳ ಚಟುವಟಿಕೆ ಗಮನಿಸಿ, ಸೂಕ್ತ ಸಲಹೆಗಳನ್ನು ನೀಡುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ಘಟಕದ ಹೆಸರು ಪಾಠದ ಹೆಸರು | ಸಾಮರ್ಥ್ಯ | ಬೋಧನೋಪಕರಣ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಘಟಕದ ಹೆಸರು ಪಾಠದ ಹೆಸರು | ಸಾಮರ್ಥ್ಯ | ಬೋಧನೋಪಕರಣ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 (KAN.12) (ಒಟ್ಟು 40ನಿ) | 05 ನಿ | ಕನ್ನಡ ಶ್ರೀ ಬಂಡೋಣ | "ಸರಳ ಪದಗಳನ್ನು ವಾಕ್ಯಗಳನ್ನು ಉಚ್ಚರಿಸುವರು" | ಪಠ್ಯ ಪುಸ್ತಕ | ಶಿಕ್ಷಕ | ಮಕ್ಕಳು ವೃತ್ತಾಕಾರವಾಗಿ ಕೂರಲು ತಿಳಿಸುವರು. | ಕನ್ನಡ ಮೂರು ಕೊಡಲಿಗಳು | ಸುಮಾರು ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯವನ್ನು ಬೆಳೆಸುವರು. | ಚಾರ್ಟ್‌ಗಳು | ಶಿಕ್ಷಕ | ವಿವಿಧ ಪದಗಳನ್ನು ಬರೆದಿರುವ ಚಾರ್ಟ್ ತೂಗು ಹಾಕಿ ಮಕ್ಕಳು ಅಲ್ಲಿನ ಪದಗಳನ್ನು ಹೇಳಿಕೊಂಡು ಬರೆಯಲು ಸೂಚಿಸುವರು. |
| | 30 ನಿ | | | | ಶಿಕ್ಷಕ | ಪಠ್ಯಪುಸ್ತಕದ ಪುಟ ಸಂಖ್ಯೆ '6'ರ ಅಭ್ಯಾಸ ಚಟುವಟಿಕೆ (1,2,3)ಗಳನ್ನು ಮಾಡಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ಕ್ರಿಯಾತ್ಮಕವಾಗಿ ತೊಡಗುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಗಳಲ್ಲಿ ಕ್ರಮಸಂಖ್ಯೆ 1ರ ಚಟುವಟಿಕೆಯನ್ನು ಪರಿಶೀಲಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಶಿಕ್ಷಕರು ಪರಿಶೀಲಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 ನಂತರದ 40 ನಿ | | ಜೀವನ ವಿಜ್ಞಾನ ಭಂಗಿಗಳು | * ಉತ್ತಮವಾದ ಕುಳಿತುಕೊಳ್ಳುವ, ನಡೆಯುವ, ನಿಲ್ಲುವ, ಮಲಗುವ, ಓದುವ ಭಂಗಿಗಳನ್ನು ರೂಢಿಸಿಕೊಳ್ಳುವರು. | ಸರಿಯಾದ ಭಂಗಿಗಳ ಚಾರ್ಟ್ | [**ಸೂಚನೆ :** ಜೀವನ ವಿಜ್ಞಾನ ವಿಷಯದಲ್ಲಿ ಎಲ್ಲಾ ಸಾಮರ್ಥ್ಯಗಳಿಗೂ ಸಹ ಸಂಬಂಧ ಇರುವುದರಿಂದ ಎರಡೂ ತರಗತಿಗಳೂ ಒಟ್ಟುಗೂಡಿ. ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವರು] | | | | | | |
| | 10 ನಿ | | | | ಶಿಕ್ಷಕ | ಮೊದಲಿಗೆ ಎರಡೂ ತರಗತಿಯ ಮಕ್ಕಳನ್ನು ಆಟದ ಬಯಲಿಗೆ ಕರೆದೊಯ್ದು, ಅವರನ್ನು ಮಕ್ಕಳ ಸಂಖ್ಯೆಗನುಗುಣವಾಗಿ 5–6 ಸಾಲುಗಳಲ್ಲಿ ನಿಲ್ಲಿಸಿ, ಶಿಥಿಲೀಕರಣ ವ್ಯಾಯಾಮ ಮಾಡಿಸುವರು (ಉದಾ : ನಿಂತಲ್ಲೇ ನೆಗೆಯುವುದು, ಓಡುವುದು ಇತ್ಯಾದಿ). | | | | | |
| | 20 ನಿ | | | | ಶಿಕ್ಷಕ | ನಂತರ ಶಿಕ್ಷಕರು, 4–5 ಮಕ್ಕಳನ್ನು ಮುಂಭಾಗಕ್ಕೆ ಕರೆಸಿ, ಅವರಿಂದ ನಿಲ್ಲುವ ಕುಳಿತುಕೊಳ್ಳುವ ಹಾಗೂ ನಡೆಯುವ ಭಂಗಿಗಳನ್ನು ಪ್ರದರ್ಶಿಸಲು ಹೇಳುವರು, ನಂತರ ಚಾರ್ಟ್‌ಗಳ ಸಹಾಯದಿಂದ ಸರಿಯಾಗಿ, ಕುಳಿತುಕೊಳ್ಳುವ, ಮಲಗುವ ನಡೆಯುವ, ಓದುವ ಭಂಗಿಗಳನ್ನು ಮಕ್ಕಳಿಗೆ ಪರಿಚಯಿಸುವರು. ಹಾಗೂ ಶಿಕ್ಷಕರೂ ಈ ಭಂಗಿಗಳನ್ನು ಪ್ರದರ್ಶಿಸಿ ಮಕ್ಕಳಿಂದಲೂ ಈ ಭಂಗಿಗಳನ್ನು ಅಭ್ಯಾಸ ಮಾಡಿಸುವರು. | | | | | |
| | 10 ನಿ | | | | ಶಿಕ್ಷಕ | ಕೊನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಮೇಲಿನ ಎಲ್ಲಾ ಭಂಗಿಗಳನ್ನು ಮಾಡಿಸುವರು. ಮಕ್ಕಳ ಭಂಗಿಗಳನ್ನು ಪರಿಶೀಲಿಸಿ ತಿದ್ದುವರು ಹಾಗೂ ಉತ್ತಮ ಭಂಗಿ ಅಭ್ಯಾಸ ಮಾಡಿರುವ ವಿದ್ಯಾರ್ಥಿಯನ್ನು ಮೆಚ್ಚಿ ಚಪ್ಪಾಳೆಯ ಮೂಲಕ ಎಲ್ಲ ಮಕ್ಕಳನ್ನೂ ಪ್ರೋತ್ಸಾಹಿಸುವರು. | | | | | |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 (ಮೊದಲ 40ನಿ) | | ಸಾ.ಉ.ಉ.ಕಾ. ಶುಭಾಶಯ ಪತ್ರ ತಯಾರಿಕೆ | * ನಿಗದಿ ಪಡಿಸಿದ ಸನ್ನಿವೇಶದಲ್ಲಿ ತಮ್ಮ ಕಲ್ಪನಾ ಸಾಮರ್ಥ್ಯದಿದ ನಿರುಪಯುಕ್ತ ವಸ್ತುಗಳನ್ನು ಬಳಸಿ ಶುಭಾಶಯ ಪತ್ರ ತಯಾರಿಸುವುದು | ಬಿಳಿಯ ಕಾರ್ಡ್ (ಹಿಂದಿನ ತರಗತಿಯಲ್ಲಿ ತಯಾರಿಸಿದ ಕಾರ್ಡ್) ಸ್ಕೆಚ್ ಪೆನ್ ಸ್ಕೇಲು | [ಸೂಚನೆ : ಸಾ.ಉ.ಉ.ಕಾ.ದ ಎಲ್ಲಾ ವಿಷಯಾಂಶಗಳು ಹಾಗೂ ಸಾಮರ್ಥ್ಯಗಳು ಸಂಪೂರ್ಣವಾಗಿ ಸಹಸಂಬಂಧ ಹೊಂದಿರುವುದರಿಂದ ಎರಡೂ ತರಗತಿಗಳೂ ಒಟ್ಟುಗೂಡಿ, ಚಟುವಟಿಕೆಯಲ್ಲಿ ತೊಡಗುವರು. | | | | | | 1ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ತೊಡಗುವರು |
| | 10 ನಿ | | | | ಶಿಕ್ಷಕ | ಮೊದಲಿಗೆ ಎಲ್ಲಾ ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ, ಅವರಿಗೆ, ತಾವುಗಳೇ ಹಿಂದಿನ ತರಗತಿಯಲ್ಲಿ ತಯಾರಿಸಿಟ್ಟ ಶುಭಾಶಯ ಪತ್ರದ ಹಾಗೂ ಅಗತ್ಯ ಕಾರ್ಡ್‌ಗಳನ್ನು ವಿತರಿಸುವರು, ವಸ್ತುಗಳನ್ನು ವಿತರಿಸುವರು. | | | | | |
| | 20 ನಿ | | | | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ ತಾವು ತಯಾರಿಸಿದ ಕಾರ್ಡ್‌ಗಳಿಗೆ ಅಂದವಾಗಿ ಚೌಕಟ್ಟನ್ನು ಹಾಕುವಂತೆ ಸೂಚನೆ ನೀಡುವರು ಮತ್ತು ಅದನ್ನು ಹೆಚ್ಚು ಅಂದಗಾಣಿಸಲು ಅವಶ್ಯಕ ಮಾರ್ಗದರ್ಶನ ನೀಡುವರು.<br>ನಂತರ ಅವುಗಳ ಮೇಲೆ ಎರಡನೇ ತರಗತಿ ಮಕ್ಕಳಿಂದ ಅಂದವಾಗಿ ಮತ್ತು ತಪ್ಪಿಲ್ಲದಂತೆ ಶುಭಾಶಯಗಳನ್ನು ಬರೆಯುವಂತೆ ಸೂಚನೆ ನೀಡುವರು. | | | | | |
| | 10 ನಿ | | | | ಶಿಕ್ಷಕ | ನಂತರ ಶಿಕ್ಷಕರು ಪ್ರತಿ ವಿದ್ಯಾರ್ಥಿಗೂ ತಾನು ತಯಾರಿಸಿದ ಶುಭಾಶಯ ಪತ್ರವನ್ನು ತರಗತಿಯಲ್ಲಿ ಎಲ್ಲರಿಗೂ ಕಾಣಿಸುವಂತೆ ಪ್ರದರ್ಶಿಸುವಂತೆ ಸೂಚಿಸುವರು ಹಾಗೂ ಉತ್ತಮವಾದ ಶುಭಾಶಯ ಪತ್ರವನ್ನು ಮೆಚ್ಚಿ ಚಪ್ಪಾಳೆಯ ಮೂಲಕ ಪ್ರೋತ್ಸಾಹ ನೀಡುವರು. | | | | | |
| ನಂತರದ 40ನಿ | 35 ನಿ<br>05 ನಿ | ಮೌಲ್ಯ ಶಿಕ್ಷಣ ಸತ್ಯ, ಪ್ರಾಮಾಣಿಕತೆ | * ಮಕ್ಕಳಲ್ಲಿ ಸತ್ಯ ಮತ್ತು ಪ್ರಾಮಾಣಿಕತೆಯನ್ನು ಬೆಳೆಸುವುದು | | ಶಿಕ್ಷಕ | ಗಾಂಧೀಜಿಯವರು ಬಾಲ್ಯದಲ್ಲಿ ಅವರು ಕೆಟ್ಟ ಚಟಗಳಿಗಾಗಿ ಕಳ್ಳತನ ಮಾಡಿ, ನಂತರ ತಂದೆಯ ಮಾರ್ಗದರ್ಶನದಲ್ಲಿ ಸತ್ಯ ಹಾಗೂ ಪ್ರಾಮಾಣಿಕತೆಯನ್ನು ರೂಢಿಸಿಕೊಂಡ ಘಟನೆಯನ್ನು ಶಿಕ್ಷಕರು ಭಾವ ಪೂರ್ಣವಾಗಿ ಹೇಳುವರು.<br>ನಂತರ ಈ ಕತೆಯಿಂದ ಮಕ್ಕಳು ತಿಳಿಯಬೇಕಾದ ನೀತಿಯನ್ನು ವಿವರಿಸುವರು.<br>ಮಕ್ಕಳಿಂದ ಶಿಕ್ಷಕರು ತಾವು ಇನ್ನೆಂದೂ ಸುಳ್ಳು ಹೇಳುವುದಿಲ್ಲವೆಂದು ಪ್ರಮಾಣ ಮಾಡಿಸುವರು. | | | | | 1ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ತೊಡಗುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>KAN.13 | 10 ನಿ | ಕನ್ನಡ<br>ಆನೆ ಬಂತೊಂದಾನೆ | ಸರಳ ಪದಗಳನ್ನು ವಾಕ್ಯಗಳನ್ನು ಉಚ್ಚರಿಸುವುದು | ವಾಲ್ ಸ್ಲೇಟ್<br>ಪಠ್ಯ ಪುಸ್ತಕ | ಶಿಕ್ಷಕ | ಮಕ್ಕಳು ವಾಲ್ ಸ್ಲೇಟನ್ನು ಬಳಸಿಕೊಂಡು ರೇಖಾಭ್ಯಾಸ ಮಾಡಲು ಸೂಚಿಸುವರು. | ಕನ್ನಡ<br>ಮೂರು ಕೊಡಲಿಗಳು | ಸುಮಾರು ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯವನ್ನು ಬೆಳೆಸುವರು | | ಶಿಕ್ಷಕ | ಮಕ್ಕಳು ಅಭ್ಯಾಸದ ಹಾಳೆಗಳನ್ನು ಅಗತ್ಯ ಸೂಚನೆಯನ್ನು ನೀಡುವರು. |
| | 30 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು | | | | ಶಿಕ್ಷಕ | ಅಭ್ಯಾಸದ ಹಾಳೆ ಪುಟ 11, 12ರಲ್ಲಿರುವ ಅಭ್ಯಾಸಗಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು ಹಾಗೂ ಅಲ್ಲಲ್ಲೆ ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು | | | | ಶಿಕ್ಷಕ | ಪುಟ ಸಂಖ್ಯೆ 12ರ ""ಭಾಷಾ ಚಟುವಟಿಕೆ"ಯನ್ನು ಹಿರೇಮಣಿಯ ನೇತೃತ್ವದಲ್ಲಿ ಮಾಡಲು ತಿಳಿಸುವರು. |
| | 30 ನಿ | | | | ಶಿಕ್ಷಕ | ವಿದ್ಯಾರ್ಥಿಗಳಿಗೆ ಪುಟಸಂಖ್ಯೆ 5ರ ಹಾಗೂ 6ರ ಅಭ್ಯಾಸಗಳನ್ನು (ಪ್ರಶ್ನೆ ಕೇಳಿ ಉತ್ತರ ಪಡೆಯುವುದು) ಹಾಗೂ ಧ್ವನಿತ ಪದಗಳನ್ನು ಹೇಳಿಸುವ ಚಟುವಟಿಕೆಯನ್ನು ಮಾಡಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯಲ್ಲಿ ಭಾಗವಹಿಸಿದ ಮಕ್ಕಳಿಗೆ ಮೆಚ್ಚುಗೆ ವ್ಯಕ್ತಪಡಿಸುವರು. ಉತ್ತಮವಾಗಿ ಭಾಗವಹಿಸಿದ ಮಕ್ಕಳಿಗೆ ಪ್ರೋತ್ಸಾಹಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

# ದಿನ - 11



| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2** *M-8* | 10 ನಿ | ಗಣಿತ ಸಂಖ್ಯೆಗಳು | * 6 ರಿಂದ 10ರ ವರೆಗಿನ ಸಂಖ್ಯೆಗಳನ್ನು ಓದುವುದು, ಗುರುತಿಸುವುದು ಮತ್ತು ಬರೆಯುವುದು. | ರಬ್ಬರ್ / ರಟ್ಟಿನ ಅಂಕಿಗಳು | ಹಿರೇಮಣಿ | ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ಕೂರಿಸುವಂತೆ ಹಿರೇಮಣಿಗೆ ಶಿಕ್ಷಕರು ಸೂಚನೆ ನೀಡುವರು.<br>ವಿದ್ಯಾರ್ಥಿಗಳಿಗೆ 8–9ರ ರಬ್ಬರ್ ಸಂಖ್ಯೆಗಳನ್ನು ಕೊಟ್ಟು ಅವುಗಳನ್ನು ಬರೆಯುವ ವಿಧಾನವನ್ನು ಮಕ್ಕಳಿಗೆ ಪರಿಚಯಿಸಿ, ಹಿರೇಮಣಿಯ ನೇತೃತ್ವದಲ್ಲಿ ರಬ್ಬರ್ ಅಕ್ಷರ ತಿದ್ದಿ ಸ್ಲೇಟಿನ ಮೇಲೆ ಸಂಖ್ಯೆ ಬರೆಯುವಂತೆ ಸೂಚನೆ ನೀಡುವರು. | ಗಣಿತ ಸಂಖ್ಯೆಗಳು | * ಎರಡು ಅಂಕಿಗಳಿರುವ ಸಂಖ್ಯೆಗಳಲ್ಲಿ ಬಿಡಿ ಮತ್ತು ಹತ್ತರ ಸ್ಥಾನಗಳನ್ನು ಗುರುತಿಸುವುದು, ಹಾಗೂ ಹತ್ತರ ಗುಂಪು, ಬಿಡಿಗಳಾಗಿ ಬಿಡಿಸಿ ಬರೆಯುವುದು. | | ಶಿಕ್ಷಕ | ಮಕ್ಕಳು ಅಭ್ಯಾಸದ ಹಾಳೆಗಳನ್ನು ಭರ್ತಿಮಾಡಲು ಅಗತ್ಯ ಸೂಚನೆಯನ್ನು ನೀಡುವರು. |
| | 30 ನಿ | | | | ಹಿರೇಮಣಿ | ವಿದ್ಯಾರ್ಥಿಗಳ ರಬ್ಬರ್ ಸಂಖ್ಯೆಯನ್ನು ಮುಂದೆ ವರ್ಗಾಯಿಸುತ್ತಾ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | ಅಭ್ಯಾಸದ ಹಾಳೆ ಪುಟ 11, 12ರಲ್ಲಿರುವ ಅಭ್ಯಾಸಗಳ ಪ್ರಶ್ನೆಗಳ ಕೇಳಿ ಉತ್ತರ ಪಡೆಯುವರು ಹಾಗೂ ಅಲ್ಲಲ್ಲೆ ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಿಸುವರು. |
| | 30 ನಿ | | | ಮಣಿಗಳು ಬೀಜಗಳು ಕಡ್ಡಿಗಳು ಗುಂಡಿಗಳು ಸಂಖ್ಯೆಗಳ ಕಾರ್ಡ್‌ಗಳು | ಶಿಕ್ಷಕ | ಮಕ್ಕಳಿಗೆ ಬೀಜ, ಕಾಳುಗಳು, ಕಡ್ಡಿಗಳು, ಗುಂಡಿಗಳು ಮತ್ತು ಮಣಿಗಳನ್ನು ನೀಡಿ, ಅವುಗಳಲ್ಲಿ 8, 9 ವಸ್ತುಗಳನ್ನು ಎಣಿಸಿ ಗುಂಪು ಮಾಡಲು ಹೇಳುವರು. ನಂತರ ಅವುಗಳೊಂದಿಗೆ ಸೂಕ್ತ ಸಂಖ್ಯಾಸೂಚಕ, ಹೊಂದಿಸುವಂತೆ ಸೂಚನೆ ನೀಡುವರು.<br> 8  9<br>ತಮ್ಮ ಕೈ ಬೆರಳುಗಳಲ್ಲಿ 8 ಮತ್ತು 9ನ್ನು ಎಣಿಸುವ ವಿಧಾನವನ್ನು ಪರಿಚಯಿಸುವರು. | | | | ಶಿಕ್ಷಕ | ಅಭ್ಯಾಸದ ಹಾಳೆ ಪುಟ 11, 12ರಲ್ಲಿರುವ ಅಭ್ಯಾಸಗಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು ಹಾಗೂ ಅಲ್ಲಲ್ಲೆ ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆಗಳನ್ನು ಗಮನಿಸಿ, ಅಗತ್ಯ ಸಲಹೆ–ಸೂಚನೆಗಳನ್ನು ನೀಡುವರು. | | | | ಶಿಕ್ಷಕ | ಅಭ್ಯಾಸದ ಹಾಳೆ ಪುಟ 11, 12ರಲ್ಲಿರುವ ಅಭ್ಯಾಸಗಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು ಹಾಗೂ ಅಲ್ಲಲ್ಲೆ ಅಭ್ಯಾಸದ ಹಾಳೆಗಳನ್ನು ಭರ್ತಿ ಮಾಡಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".